
## ಮನ ಮಿಡಿದ ಭೈರವಿ ರಾಗ

‘ಚಂದನ’ ವಾಹಿನಿ ಇತ್ತೀಚೆಗೆ ಹಿಂದೂಸ್ತಾನಿ ಸಂಗೀತದ ಭೈರವಿ ರಾಗದ ಹಾಡುಗಳಿರುವ ಸಿನಿಮಾ ‘ರಾಗ ಭೈರವಿ’ಯನ್ನು ಪ್ರಸಾರ ಮಾಡಿತು. ಇದರಿಂದ ಸಂಗೀತಪ್ರಿಯರಿಗೆ ಭೈರವಿ ರಾಗದ ರಸದೌತಣ ಉಣಬಡಿಸಿದಂತೆ ಆಯಿತು. ಮಾತ್ರವಲ್ಲದೆ, ಸಂಗೀತ ರೋಗವನ್ನೂ ವಾಸಿ ಮಾಡುತ್ತದೆ ಎಂಬ ಸಂದೇಶವನ್ನು ನೀಡಿದಂತೆ ಆಯಿತು. ಸಿನಿಮಾದಲ್ಲಿ ಹೊಡೆದಾಟ ಮಾರಾಮಾರಿಯ ದೃಶ್ಯಗಳಿಲ್ಲ. ಹಿತಕರ ಸನ್ನಿವೇಶದಲ್ಲಿ ಸಿನಿಮಾ ಕಟ್ಟಿರುವ ತಂಡಕ್ಕೆ ಧನ್ಯವಾದಗಳು. ಈ ರೀತಿಯ ಚಲನಚಿತ್ರಗಳನ್ನು ಹೆಚ್ಚು ಪ್ರಸಾರ ಮಾಡಬೇಕೆಂಬುದು ನಮ್ಮ ಕೋರಿಕೆ.

—ಕಮಲಾದೇವಿ ರಾಜಶೇಖರ ಹಳ್ಳೂರ್



## ಕ್ರಿಕೆಟ್ ಅಂಗಳದಲ್ಲಿ ನಾಯಿಯೂ ನಾಯಕ!

ಕ್ರಿಕೆಟ್ ಮೈದಾನದಲ್ಲಿ ಪಂದ್ಯದ ನಡುವೆ ನಾಯಿಗಳು ನುಸುಳಿ ಮನರಂಜನೆ ನೀಡುತ್ತಿದ್ದುದನ್ನು ನೋಡಿದ್ದೇವೆ. ಈ ವರ್ಷದ ಐಪಿಎಲ್‌ನಲ್ಲಿ ನಾಯಿಯೊಂದು ಭಿನ್ನ ಕಾರಣಕ್ಕೆ ಗಮನಸೆಳೆಯುತ್ತಿದೆ. ಈ ರೋಬೊ ನಾಯಿ ಆಧುನಿಕ ತಂತ್ರಜ್ಞಾನದ ಕ್ಯಾಮೆರಾ ಹೊಂದಿದೆ. ಇದು ಪಂದ್ಯದ ವಿವಿಧ ದೃಶ್ಯಗಳನ್ನು ತನ್ನ ಕಣ್ಣಾಲಿಗಳಲ್ಲಿ ಸೆರೆಹಿಡಿಯುತ್ತದೆ. ಚಿಯರ್ ಗರ್ಲ್ಸ್ ಕುಣಿವಾಗ ತಾನೂ ಕುಣಿಯುತ್ತೆ! ಆಟಗಾರರ ಭಾವನೆಗೂ ಸ್ಪಂದಿಸುವ ವಿಶೇಷ ಗುಣ ಅದಕ್ಕಿದೆ. ಟೀವಿಯಲ್ಲಿ ಅದರ ನಡಿಗೆ, ಡಾನ್ಸ್ ನೋಡುವುದೇ ಸೊಗಸು.

—ನಗರ ಗುರುದೇವ್ ಭಂಡಾರ್ಕರ್, ಹೊಸನಗರ

ವಾರದ ಪತ್ರ

## ಯಜಮಾನ! ಎಡರು ತೊಡರು ಯಾನ

ಅಜ್ಜನ ಆಸ್ತಿಯ ಹಕ್ಕು ಪಡೆಯಲು ಝಾನ್ಸಿ, ರಾಘು ಜೊತೆ ಒಪ್ಪಂದದ ಮದುವೆ ಮಾಡಿಕೊಳ್ಳುತ್ತಾಳೆ. ಅದರ ಸುತ್ತ ಹೆಣೆದಿರುವ ಕಟ್ಟುಕಥೆಯನ್ನೇ ಕಲರ್ಸ್ ಕನ್ನಡದ ‘ಯಜಮಾನ’ ಹೇಳುತ್ತಿದೆ. ಇವರಿಬ್ಬರ ನಾಟಕದ ಮದುವೆಯನ್ನೇ ದೀರ್ಘವಾಗಿ ಎಳೆಯುತ್ತಿದ್ದಾರೆ.

ಝಾನ್ಸಿ ಗಂಡುಕುಲವನ್ನು ದ್ವೇಷಿಸುವ ಹೆಣ್ಣು. ರಾಘು ಸೌಮ್ಯ ಸ್ವಭಾವದ ಹುಡುಗ. ಅವನು ಒಪ್ಪಂದದ ಒಂದು ತಿಂಗಳನ್ನು ಪೂರೈಸಲು ಏಗುತ್ತಿದ್ದಾನೆ. ಝಾನ್ಸಿಗೆ ರಾಯ್ ಎಂಬ ಸಹಾಯಕನಿದ್ದಾನೆ. ಅವನು ಇವರಿಬ್ಬರನ್ನು ಬಾಳಸಂಗಾತಿಗಳನ್ನಾಗಿ ಮಾಡಬೇಕೆಂದು ಯತ್ನಿಸುತ್ತಾನೆ. ಈ ಕಾರಣಕ್ಕೆ ಝಾನ್ಸಿಯಿಂದ ಕಪಾಳಕ್ಕೆ ಬಾರಿಸಿಕೊಳ್ಳುತ್ತಾನೆ. ರಾಘು ತನ್ನ ತಂಗಿಯ ನಾದಿನಿಯನ್ನು ಮದುವೆಯಾಗುವುದಾಗಿ ಮಾತು ಕೊಟ್ಟಿದ್ದಾನೆ. ಆದರೆ ಝಾನ್ಸಿಯ ಅಜ್ಜ ತನ್ನ ಮೊಮ್ಮಗಳ ದಾಂಪತ್ಯ ಜೀವನ ಸುಖಮಯವಾಗಲಿ ಎಂಬ ಆಶಯದಿಂದ ಹೋಮ ಮಾಡಿಸುತ್ತಾರೆ. ಅದೇ ದಿನ ರಾಘುವಿನ ನಿಶ್ಚಿತಾರ್ಥವೂ ಇರುತ್ತದೆ. ಒಂದೇ ದೇವಸ್ಥಾನದಲ್ಲಿ ಎರಡು ಕಾರ್ಯಕ್ರಮಗಳು ಇರುವುದರಿಂದ ರಾಘು ಪರದಾಡುತ್ತಾನೆ.

ರಾಯ್‌ಗೆ ಝಾನ್ಸಿ ಮಾತುಮಾತಿಗೂ ಕೆನ್ನೆಗೆ ಬಾರಿಸುವುದು ಸರಿ ಕಾಣಿಸುವುದಿಲ್ಲ. ಯಾರು ತಾನೆ ಪದೇ ಪದೇ ಕಪಾಳಕ್ಕೆ ಹೊಡೆಸಿಕೊಳ್ಳುತ್ತಾರೆ. ಝಾನ್ಸಿಯ ಅಟ್ಟಹಾಸ ಅತಿಯಾಯಿತು. ಝಾನ್ಸಿಯ ಅಜ್ಜನ ಪಾತ್ರದಲ್ಲಿ ರಮೇಶ್ ಭಟ್ ಮತ್ತು ಸಂಪಂಗಿಯ ಪಾತ್ರದಲ್ಲಿ ಎಸ್. ನಾರಾಯಣ್ ತುಂಬಾ ಚೆನ್ನಾಗಿ ಅಭಿನಯಿಸಿದ್ದಾರೆ.

—ಮುರಲೀಧರ ಕುಲಕರ್ಣಿ, ಬೀದರ್

## ಮನೆ ಹಾಳು ಮಾಡಲಿಕ್ಕೆ 12 ಸೂತ್ರ!

‘ಸುಖ ಸಂಸಾರಕ್ಕೆ 12 ಸೂತ್ರಗಳು’ ಎಂಬ ಹಾಸ್ಯ ಸಿನಿಮಾ ದಶಕಗಳ ಹಿಂದೆ ಬಂದಿತ್ತು. ಅದರಲ್ಲಿ ಒಂದು ಸಂಸಾರಕ್ಕೆ ಏನೆಲ್ಲಾ ತೊಂದರೆ ಕೊಡಬಹುದು ಎಂಬುದನ್ನು ಲಘುವಾಗಿ ಹೇಳಿದ್ದರು. ಆದರೆ ಇವತ್ತಿನ ಧಾರಾವಾಹಿಗಳನ್ನು ನೋಡಿದರೆ ಅದನ್ನು ಮನೆ ಹಾಳು ಮಾಡಲಿಕ್ಕೆ 12 ಸೂತ್ರಗಳು ಎಂದು ಬದಲಿಸಬಹುದೇ? ಧಾರಾವಾಹಿಗಳಲ್ಲಿ ಯುವದಂಪತಿಗಳು ಅನ್ಯೋನ್ಯವಾಗಿ ಇರುವುದಿಲ್ಲ. ತಮಗೆ ತಾವೇ ಮಾತಾಡಿಕೊಳ್ಳುವ ಪಾತ್ರಗಳು, ಮದುವೆ ಆಗಿರುವ ಗಂಡಸಿನ ಹಿಂದೆ ಬೀಳುವ ಯುವತಿಯರು, ಊಟ, ಹಾಲು, ಹಣ್ಣಿನ ರಸದಲ್ಲಿ ಮತ್ತು ಬರಿಸುವ ಔಷಧ ಬೆರೆಸುವುದು – ಹೀಗೆ ಹಲವು ನೇತ್ಯಾತ್ಮಕ ಪ್ರಸಂಗಗಳನ್ನು ನೋಡಬಹುದು. ಇದರ ಬದಲು ಉತ್ತಮ ಹಾಗೂ ನೈಜ ಜೀವನಕ್ಕೆ ಪೂರಕವಾದ ಕಥಾ ಹಂದರದಲ್ಲಿ ಧಾರಾವಾಹಿಗಳು ಬರಲಿ.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ತೆರೆಯ ಮೇಲೆ ಪ್ರೇಕ್ಷಕಿ!

ಕಲರ್ಸ್ ಕನ್ನಡ ವಾಹಿನಿಯ ‘ವಧು’ ಧಾರಾವಾಹಿಯಲ್ಲಿ ಮದುವೆ ಬಗ್ಗೆ ಮಾತನಾಡುವಾಗಲೆಲ್ಲಾ ಅಮ್ಮನ ಪಾತ್ರಧಾರಿ ಸುಧಾ ಬೆಳವಾಡಿ ಪ್ರೇಕ್ಷಕರಂತೆ ಸುಮ್ಮನೆ ನಿಂತು ನೋಡುತ್ತಿರುತ್ತಾರೆ. ಉಳಿದಂತೆ ಎಲ್ಲ ಚಿಕ್ಕಮ್ಮನ ಕಾರುಬಾರು.

—ಸೀತಾ ಕೇಶವ, ಸಿಡ್ನಿ

## ಸುಮಧುರ ಗಾಯನದ ಅದ್ಭುತ ಲೋಕ

ಝೀ ಕನ್ನಡದ ‘ಸರಿಗಮಪ’ ಕಾರ್ಯಕ್ರಮದಲ್ಲಿ 60–70ರ ದಶಕದ ಸಿನಿಮಾ ಹಾಡುಗಳನ್ನು ಗಾಯಕರು ತುಂಬಾ ಚೆನ್ನಾಗಿ ಪ್ರಸ್ತುತಪಡಿಸಿದರು. ವಿಶೇಷ ಅತಿಥಿಗಳಾಗಿ ನಟ ಶ್ರೀನಾಥ್ ಹಾಗೂ ಅನು ಪ್ರಭಾಕರ್ ಆಗಮಿಸಿದ್ದರು.



ಗಾಯಕರು ಅತಿಥಿಗಳು ಅಭಿನಯಿಸಿದ ಸುಮಧುರ ಗೀತೆಗಳನ್ನು ಹಾಡಿ ರಂಜಿಸಿದರು. ರಾಜೇಶ್ ಕೃಷ್ಣನ್, ವಿಜಯ್ ಪ್ರಕಾಶ್, ಹೇಮಂತ್ ಅವರೂ ಹಾಡಿದ್ದು ಮನಸಿಗೆ ಮುದ ನೀಡಿತು.

—ಭಾರತೀ ಗಂಗಾಧರ್, ಬೆಂಗಳೂರು

ಝೀ ಕನ್ನಡದ ಸರಿಗಮಪ ತುಂಬ ಚೆನ್ನಾಗಿದೆ. ಜನಪ್ರಿಯ ಗೀತೆಗಳ ಸುತ್ತು ಅದ್ಭುತವಾಗಿತ್ತು. ನಟಿ ಅನು ಪ್ರಭಾಕರ್ ಮತ್ತು ನಟ ಶ್ರೀನಾಥ್ ಅವರ ಆಗಮನ ವಿಶೇಷ ಅನ್ನಿಸಿತು. ಅತಿಥಿಗಳ ಲವಲವಿಕೆ ಕಂಡು ಸಂತೋಷ ಅನ್ನಿಸಿತು. ಅವರ ಸಿನಿಮಾಗಳ ಜನಪ್ರಿಯ ಹಾಡುಗಳು ಸೊಗಸಾಗಿ ಮೂಡಿಬಂದವು. ಹೀಗೆ ಹೊಸ ಬಗೆಯ ಸುತ್ತುಗಳನ್ನು ಏರ್ಪಡಿಸುವುದು ಒಳ್ಳೆಯದು.

—ಸುಜಾತ ಆರ್., ತುಮಕೂರು